ಕರ್ನಾಟಕ ಉಚ್ಚ ನ್ಯಾಯಾಲಯ

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಸುಧೀಂದ್ರರಾವ್

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ -ವಿರುದ್ಧ ಅನ್ನಪೂರ್ಣ ಮತ್ತು ಇತರರು

ಸಂಕೀರ್ಣ ಪ್ರಥಮ ಅಪೀಲುಸಂಖ್ಯೆ: 31896/2010 (ಡಬ್ಲ್ಯೂಸಿ), ದಿನಾಂಕ 13 ನೇ ಸೆಪ್ಟೆಂಬರ್, 2019

ತೀರ್ಪ

ನ್ಯಾಯಮೂರ್ತಿ ಶ್ರೀ ಎನ್.ಕೆ. ಸುಧೀಂದ್ರರಾವ್

ಮಾನ್ಯ ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ಪರಿಹಾರ ಆಯುಕ್ತರು, ಉಪ-ವಿಭಾಗ -1, ಬಿಜಾಪುರ ಇವರು ನೀಡಿದ ತೀರ್ಪಿನ ಮತ್ತು ಆದೇಶದ ವಿರುದ್ಧ ಈ ಅಪೀಲು ನಿರ್ದೇಶಿತವಾಗಿದ್ದು, ಅದರಲ್ಲಿ ಶ್ರೀಮತಿ ಅನ್ನಪೂರ್ಣ ಮತ್ತು ಇತರರು ಡಬ್ಲ್ಯುಸಿಎ/ಎಸ್‌ಆರ್‌ಸಂಖ್ಯೆ: 45/2003 ರಲ್ಲಿ ಸಲ್ಲಿಸಿದ ಕ್ಲೇಮು 0 ಅರ್ಜಿಯನ್ನು ಭಾಗಶಃ ಪುರಸ್ಕರಿಸಿ, 3,79,120/- ರೂ.ಗಳ ಪರಿಹಾರ ಧನವನ್ನು ವಾರ್ಷಿಕ ಶೇಕಡ 12 ರ ದರದ ಬಡ್ಡಿಯೊಂದಿಗೆ ಐತೀರ್ಪು ನೀಡಲಾಗಿದೆ.

2. ಕ.ರಾ.ರ.ಸಾ.ಸಂ., ಬಿಜಾಪುರ ವಿಭಾಗದ ವ್ಯವಸ್ಥಾಪಕ ನಿರ್ದೇಶಕರು ಅಪೀಲುದಾರರಾಗಿದ್ದು, ಮುಖ್ಯ ಕಾನೂನು ಅಧಿಕಾರಿ, ಕೇಂದ್ರ ಕಚೇರಿ, ಸಾರಿಗೆ ಸದನ, ಕಲಬುರ್ಗಿ ಇವರು ಪ್ರತಿನಿಧಿಸಿದ್ದಾರೆ.ಆಯುಕ್ತರ ಮುಂದೆ ವ್ಯವಹರಣೆಗಳನ್ನು ಪ್ರಾರಂಭಿಸಲು ಎತ್ತಿದ ಸಂಗತಿಗಳ ಸಾರಾಂಶವೆಂದರೆ, ನಿರ್ವಾಹಕನಾಗಿ ಕಾರನಿರ್ವಹಿಸುತ್ತಿದ್ದ ಬಸವರಾಜ್ ಎಂಬಾತನು, ಅಪೀಲುದಾರ-ಸಂಸ್ಥೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯು ಆತನಿಗೆ ಮಾಡಿದ ಅವಮಾನದಿಂದಾಗಿ ಬಿಜಾಪುರದ ಸಂತೋಷ್ ಲಾಡ್ಜ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡನು.ಸಂಸ್ಥೆಯ ಆದಾಯದಲ್ಲಿ ಸಣ್ಣಪುಟ್ಟ ಕಳ್ಳತನ ಮಾಡಿ, ಹಣ ದುರ್ಬಳಕೆ ಮಾಡಿಕೊಂಡಿದ್ದಕ್ಕಾಗಿ ಬಸವರಾಜ್‌ನನ್ನು ಕೆಲಸದಿಂದ ವಜಾಗೊಳಿಸಲಾಗಿತ್ತು.ಈ ಸಂಬಂಧದಲ್ಲಿ, ಆತನ ಅವಲಂಬಿತರಾದ ಪತ್ನಿ, ಮಕ್ಕಳು ಮತ್ತು ತಂದೆ-ತಾಯಿಗಳು ಡಬ್ಲ್ಯುಸಿಎ/ಎಸ್‌ಆರ್‌ಸಂಖ್ಯೆ: 45/2009 ರಲ್ಲಿ ಅರ್ಜಿ ಕ್ಲೇಮು ಮಾಡಿದ್ದು,ದಿನಾಂಕ: 15.05.2009 ರಂದು ಅದನ್ನು ಪುರಸ್ಕರಿಸಲಾಗಿತ್ತು.ಈ ಆದೇಶದ ವಿರುದ್ಧ, ಪ್ರತಿವಾದಿ-ಸಂಸ್ಥೆಯು ಅಪೀಲಿನೊಂದಿಗೆ ಬಂದಿದೆ.

3. 2733 ದಿನಗಳ ವಿಳಂಬವನ್ನು ಮನ್ನಾ ಮಾಡಿದ ನಂತರ ಸಲ್ಲಿಸಲಾಗಿದ್ದ ಅರ್ಜಿಗೆ ಮಾನ್ಯ ಆಯುಕ್ತರು ಅವಕಾಶ ನೀಡಿ, ಗುಣಾರ್ಹತೆಗಳ ಮೇಲೆ ವಿಲೆಗಾಗಿ ಅರ್ಜಿಯನ್ನು ಕೈಗೆತ್ತಿಕೊಂಡು, 3,79,120/- ರೂ.ಗಳ ಪರಿಹಾರವನ್ನು ಮಂಜೂರು ಮಾಡಿದ್ದಾರೆ.

4.ದಿನಾಂಕ: 12.03.2018 ರಂದು ಈ ನ್ಯಾಯಾಲಯವು, ಈ ಮುಂದಿನ ಕಾನೂನಿನ ಗಣನಾರ್ಹ ಪ್ರಶ್ನೆಗಳನ್ನು ರೂಪಿಸಿದೆ:

1) ಮರಣ ಹೊಂದಿದ ದಿನಾಂಕದಂದು ಮೃತನು ನಿಯೋಜನೆಯಲ್ಲಿ ಇಲ್ಲದೆ ಇದ್ದಾಗ (ಆತನುದಿನಾಂಕ: 17.09.2000 ದಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ), ಮೃತನ ಕಾನೂನುಸಮ್ಮತ ಪ್ರತಿನಿಧಿಗಳಿಗೆ, ಕಾರ್ಮಿಕ ಪರಿಹಾರ ಆಯುಕ್ತರು 3,79,120/- ರೂ.ಗಳ ಪರಿಹಾರವನ್ನು ನೀಡಿರುವುದು ಸಮರ್ಥನೀಯವೇ?

2) ಮೂಲ ನೌಕರನನ್ನುದಿನಾಂಕ: 18.06.2000 ದಂದು ಕರ್ತವ್ಯದಿಂದ ವಜಾಗೊಳಿಸಿರುವಾಗ ಹಾಗೂ ನೌಕರಿ ಇಲ್ಲದೆದಿನಾಂಕ: 29.07.2000 ದಂದು ಆತನು ನೇಣು ಹಾಕಿಕೊಂಡಿರುವಾಗ, ಪರಿಹಾರವನ್ನು ನೀಡುವಲ್ಲಿ ಕಾರ್ಮಿಕ ಪರಿಹಾರ ಆಯುಕ್ತರ ಕ್ರಮವು ಸಮರ್ಥನೀಯವೇ?

3) ಮೊಕದ್ದಮೆಯ ಸಂಗತಿಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ ದಾಖಲೆಯಲ್ಲಿನ ಸಂಪೂರ್ಣ ಸಾಕ್ಷ್ಯವನ್ನು ನಿರ್ಲಕ್ಷಿಸಿ ಪರಿಹಾರ ನೀಡಿದ ಕಾರ್ಮಿಕ ಪರಿಹಾರ ಆಯುಕ್ತರ ಕ್ರಮವು ಸಮರ್ಥನೀಯವೇ?

ಕಾನೂನಿನ ಮುಖ್ಯ ಪ್ರಶ್ನೆಗಳನ್ನು, ಬಹಿರಂಗ ನ್ಯಾಯಾಲಯದಲ್ಲಿ ಎರಡೂ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಸಮ್ಮುಖದಲ್ಲಿ ಈ ಕೆಳಗಿನಂತೆ ಮರು-ರೂಪಿಸಲಾಗಿದೆ:

(i) ಬಿಜಾಪುರದ ಸ ೦ ತೋಷ್ ಲಾಡ್ಜ್‌ನಲ್ಲಿದಿನಾಂಕ: 27.09.2000 ದಂದು ಬಸವರಾಜ್‌ನ ಮರಣವು, ನಿಯೋಜನೆಯಿಂದ ಮತ್ತು ನಿಯೋಜನೆಯ ಅವಧಿಯಲ್ಲಿ ಉದ್ಭವಿಸಿದ ಕಾರಣಗಳಿಂದಾಗಿದೆಯೇ?

(ii) ಸದರಿ ಬಸವರಾಜ್‌ನ ಜೀವವನ್ನು ತೆಗೆದುಕೊಂಡ ಘಟನೆಯು ಕಾರ್ಮಿಕ ಪರಿಹಾರ ಅಧಿನಿಯಮದ 3 ನೇ ಪ್ರಕರಣದ ಅಡಿಯಲ್ಲಿ ಬರುತ್ತದೆಯೇ?

5. ಅಪೀಲುದಾರ-ಸಂಸ್ಥೆಯ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಶಿವಶಂಕರ್ ಹೆಚ್, ಮಣೂರ್ ಅವರು,ದಿನಾಂಕ: 27.09.2000 ದಂದು ಬಸವರಾಜನ ಮರಣವು ಅಪಘಾತದ ಕಾರಣದಿಂದ ಆಗಿರುವುದಿಲ್ಲ ಮತ್ತು ಆತನ ಮರಣಕ್ಕೆ ನಿಯೋಜಕ ಸಂಸ್ಥೆಂತು ಯಾವುದೇ ರೀತಿಯಿ ೦ ದಲೂ ಹೊಣೆಯಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.

6. ಇದಲ್ಲದೆ ಮಾನ್ಯ ನ್ಯಾಯವಾದಿಗಳು, ಸದರಿ ಬಸವರಾಜನ ಮರಣವು, ನಿಯೋಜನೆಯ ಹೊರಗಿನ ಕಾರಣದಿಂದ ಮತ್ತು ಮೃತನ ಅಪರಾಧಿ ಪ್ರಜ್ಞೆಯಿಂದಾಗಿದೆ 0 ಎಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ ಅವರು, ಕಾರ್ಮಿಕ ಪರಿಹಾರ ಅಧಿನಿಯಮದ ಅಡಿಯಲ್ಲಿ ಪರಿಹಾರವನ್ನು ನೀಡುವುದಕ್ಕೆ ಸಂಬಂಧಿಸಿದ ಕಾನೂನಿನ ತತ್ವಗಳನ್ನು ವಿವೇಚಿಸಲು ಮಾನ್ಯ ಸದಸ್ಯರು ವಿಫಲರಾಗಿದ್ದಾರೆಂದು ನಿವೇದಿಸಿಕೊಂಡಿದ್ದಾರೆ.

7. ಇದಕ್ಕೆ ತದ್ವಿರುದ್ಧವಾಗಿ, ಪ್ರತಿವಾದಿ-ಕ್ಲೇಮುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಬಾಬು ಹೆಚ್. ಮೆಟಗುಡ್ಡ ಅವರು, ಪರಿಹಾರವನ್ನು ಕ್ಲೇಮು ಮಾಡಿರುವ ಅಧಿನಿಯಮವು ಒಂದು ಸಾಮಾಜಿಕ ಶಾಸನವಾಗಿದ್ದು, ಅದು ನಿಯೋಜನೆಯ ಕಾರಣದಿಂದ ಮತ್ತು ನಿಯೋಜನೆಯ ಅವಧಿಯಲ್ಲಿ ಸಂಭವಿಸುವ ಅಪಘಾತದಲ್ಲಿ ಉಂಟಾದ ಗಾಯಗಳಿಗಾಗಿ ಪರಿಹಾರವನ್ನು ಉಪಬಂಧಿಸುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ ಮಾನ್ಯ ನ್ಯಾಯವಾದಿಗಳು, ಮೃತನು ವಜಾಗೊಂಡಿದ್ದರೂ, ಆತನನ್ನು ಸೇವೆಯಿಂದ ತೆಗೆದುಹಾಕಿರಲಿಲ್ಲ, ಆ ಮೂಲಕ ' ಕೆಲಸಗಾರ ' ಅಥವಾ ' ನೌಕರ ' ಪದ ಪರಿಭಾಷೆಗೆ ಆತನು ಬರುತ್ತಾನೆ ಹಾಗೂ ಕ್ಲೇಮುದಾರರು ಸಂಪೂರ್ಣವಾಗಿ ಆತನ ಮೇಲೆ ಅವಲಂಬಿತರಾಗಿರುವರು ಮತ್ತು ಅವರು ಪರಿಹಾರಕ್ಕೆ ಹಕ್ಕುಳ್ಳವರಾಗಿರುವರು ಎಂಬುದು ನಿರ್ವಿವಾದ ಸಂಗತಿಯಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.

8. ಅಪಘಾತವು ಅದರ ಸಾಮಾನ್ಯ ಮಾತಿನ ರೂಢಿಯಲ್ಲಿ, ಸಂಬಂಧಪಟ್ಟ ವ್ಯಕ್ತಿಗಳ ಅಥವಾ ಸಂದರ್ಭದ ನಿಯಂತ್ರಣವನ್ನು ಮೀರಿದ ಒಂದು ದುರದೃಷ್ಟಕರ ಘಟನೆ ', ' ಒಂದು ದುರ್ಘಟನೆ ' ಆಗಿದೆ. ಅದು ಸಂಪೂರ್ಣವಾಗಿ ಅನಪೇಕ್ಷಿತ ಮತ್ತು ಅನಿರೀಕ್ಷಿತ ಸಂದರ್ಭಗಳ ಕಾರಣದಿಂದ, ಅಪಘಾತಕ್ಕೊಳಗಾಗುವ ವ್ಯಕ್ತಿಯ ಯಾವುದೇ ಯೋಜನೆ ಅಥವಾ ಅಪೇಕ್ಷೆ ಇಲ್ಲದೆ ಸಂಭವಿಸುತ್ತದೆ.ಅಪಘಾತ ಪದದ ಅರ್ಥವನ್ನು, ಅದು ಗಾಯವಾಗಿರಲಿ ಅಥವಾ ಮರಣವಾಗಿರಲಿ, ಅಪಘಾತಕ್ಕೊಳಗಾದವನ ದೃಷ್ಟಿಕೋನದಿಂದ ಅನ್ವಯಿಸಬೇಕು.

9. ಉದ್ಯೋಗಿಗಳ ಪರಿಹಾರ ಅಧಿನಿಯಮ, 1923 ರ (ಸಂಕ್ಷಿಪ್ತವಾಗಿ ' ಅಧಿನಿಯಮ ') 3 ನೇ ಪ್ರಕರಣವು, ನಿಯೋಜನೆಯ ಕಾರಣದಿಂದ ಮತ್ತು ನಿಯೋಜನೆಯ ಅವಧಿಯಲ್ಲಿ ಕೆಲಸಗಾರನಿಗೆ ಆದ ಗಾಯಗಳಿಗಾಗಿ, ಆತನಿಗೆ ಮತ್ತು ಆತನ ಮರಣದ ಸಂದರ್ಭದಲ್ಲಿ ಆತನ ಅವಲಂಬಿತರಿಗೆ ಪರಿಹಾರವನ್ನು ಉಪಬಂಧಿಸುತ್ತದೆ.

10. 19 ನೇ ಶತಮಾನದ ಅವಧಿಯಲ್ಲಿ ನಿಯೋಜಕರು ಸಮರ್ಥಿಸಿಕೊಳ್ಳುತ್ತಿದ್ದ ಅಧಿಕಾರಯುತ ಪ್ರತಿವಾದಗಳಿಗೆ ಪ್ರತಿಯಾಗಿ ಸುಧಾರಣಾತ್ಮಕ ಕ್ರಮವಾಗಿ ಈ ಅಧಿನಿಯಮವು ಜಾರಿಗೆ ಬಂದಿತು ಹಾಗೂ ಮಾರಣಾಂತಿಕ ಅಪಘಾತ ಅಧಿನಿಯಮ, 1855 ಇದು, ನೌಕರರು ಮತ್ತು ಅವರ ಅವಲಂಬಿತರನ್ನು ಸಂರಕ್ಷಿಸುತ್ತಿದ್ದ ಹಿಂದಿನ ಶಾಸನವಾಗಿತ್ತು.ಇದಕ್ಕೆ ಮೊದಲು, ಪ್ರತಿವಾದವು ಎಷ್ಟು ಗಂಭೀರ ಮತ್ತು ಸಮರ್ಥವಾಗಿತ್ತೆಂದರೆ, ಮರಣವನ್ನು ಸಹ ಪರಿಹಾರಕ್ಕೆ ಪರಿಗಣಿಸುತ್ತಿರಲಿಲ್ಲ, ಅದರಲ್ಲಿ ನಿಯೋಜಕ ಅಥವಾ ಜವಾಬ್ದಾರನಾದ ವ್ಯಕ್ತಿಯು, ಆ ವ್ಯಕ್ತಿಯ ಮರಣದೊಂದಿಗೆ ಅಂತ್ಯವಾಗುತ್ತದೆ ಎಂಬ ಪ್ರತಿವಾದವನ್ನು ಮುಂದಿಡುತ್ತಿದ್ದರು." ನಿಯೋಜನೆಯ

ಹೊರಗೆ ' ಎಂಬ ಪದಗಳನ್ನು ' ಕಾರಣದಿಂದ ' ಎಂಬ ಅರ್ಥದಲ್ಲಿ ಬಳಸಲಾಗುತ್ತಿತ್ತು ಮತ್ತು ' ಅವಧಿ ' ಪದವನ್ನು ನಿಯೋಜನೆಯ ಮುಂದುವರಿಕೆಯ ಅವಧಿಯಲ್ಲಿ ' ಎಂಬ ಅರ್ಥದಲ್ಲಿ ಬಳಸಲಾಗುತ್ತಿತ್ತು.ಈ ಸಂದರ್ಭಗಳ ಮೇರೆಗೆ, ಮಾರಣಾಂತಿಕ ಅಪಘಾತ ಅಧಿನಿಯಮ, 1855 ಆಶಾ ಕಿರಣವನ್ನು ತಂದಿತು.

11. ಪ್ರಸ್ತುತ ನೌಕರರ ಪರಿಹಾರ ಅಧಿನಿಯಮವು, ನಿಯೋಜನೆಯ ಕಾರಣದಿಂದ ಮತ್ತು ನಿಯೋಜನೆಯಲ್ಲಿರುವ ಅವಧಿಯಲ್ಲಿ ಉಂಟಾಗುವ ಯಾವುದೇ ಗಾಯಗಳ ಸಂಬಂಧದಲ್ಲಿ, ಗಾಯಗೊಂಡ ಕೆಲಸಗಾರನಿಗೆ ಪರಿಹಾರವನ್ನು ಹಾಗೂ ನಿಯೋಜನೆಯ ಕಾರಣದಿಂದ ಮತ್ತು ನಿಯೋಜನೆಯಲ್ಲಿರುವ ಅವಧಿಯಲ್ಲಿ ಮರಣ ಸಂಭವಿಸಿದ ಸಂದರ್ಭದಲ್ಲಿ ಆತನ ಅವಲಂಬಿತರಿಗೆ ಪರಿಹಾರವನ್ನು ಉಪಬಂಧಿಸುತ್ತದೆ, ವ್ಯಕ್ತಿಯ ಮರಣದೊಂದಿಗೆ ಕಾರಣವು ಮುಕ್ತಾಯಗೊಳ್ಳುತ್ತದೆ.

12. ಇದಲ್ಲದೆ, ರೇಷ್ಮೆ ದಾರ ತೆಗೆಯುವ ಪ್ರಕ್ರಿಯೆಯಲ್ಲಿ ಕಾರನಿರ್ವಹಿಸುವ ನೌಕರರು, ಮುಂತಾದವರಿಗೆ ಸಿಲಿಕೋಸಿಸ್ನಂಥ ಉದ್ಯೋಗ ಸಂಬಂಧಿ ರೋಗಗಳ ಸಂಬಂಧದಲ್ಲಿ, ಎಂದರೆ ಅವರು ಕೆಲವು ರೋಗಗಳನ್ನುಂಟು ಮಾಡುವ ಅತ್ಯಂತ ಸಂಭವವಿರುವಂಥ ನಿರ್ದಿಷ್ಟ ರೀತಿಯ ವಾತಾವರಣಕ್ಕೆ ಗುರಿಯಾಗುತ್ತಾರೆ, ಅದನ್ನು ಉದ್ಯೋಗ ಸಂಬಂಧಿ ರೋಗಗಳೆಂದು ಪರಿಗಣಿಸಲಾಗುತ್ತದೆ.ಒಮ್ಮೆ ಉದ್ಯೋಗ ಸಂಬಂಧಿ ರೋಗಗಳು ಸಾಬೀತಾದಾಗ, ಅದನ್ನು ಉದ್ಯೋಗದಿಂದ ಮತ್ತು ಉದ್ಯೋಗದ ಅವಧಿಯಲ್ಲಿ ಉದ್ಭವಿಸಿದ ಅಪಘಾತವೆಂದು ಪರಿಗಣಿಸಲಾಗುತ್ತದೆ.

13. ಅಪಘಾತದ ಸ್ವರೂಪವನ್ನು ಮತ್ತು ಅರ್ಥವನ್ನು ಮೂರನೇ ವ್ಯಕ್ತಿಯ ದೃಷ್ಟಿಕೋನದಿಂದ ಪರಿಗಣಿಸಲಾಗುವುದಿಲ್ಲ.ಉದಾಹರಣೆಗೆ-ಪೇರಿಸಿದ ಭಾರವು ವ್ಯಕ್ತಿಯ ಮೇಲೆ ಬಿದ್ದಾಗ, ಅದನ್ನು ದೂರದಲ್ಲಿ ನಿಂತಿದ್ದವನು ನೋಡಿದಾಗ, ಎರಡನೇ ವ್ಯಕ್ತಿಯು, ನಿರ್ದಿಷ್ಟ ತೂಕವು ಬೀಳುತ್ತಿದೆ ಎಂಬ ಜ್ಞಾನವನ್ನು ಹೊಂದಿರುತ್ತಾನೆಯೇ ಹೊರತು ಸಂಬಂಧಪಟ್ಟ ವ್ಯಕ್ತಿಯಲ್ಲ.

14. ಅಪಘಾತಕ್ಕೊಳಗಾದ ವ್ಯಕ್ತಿಯ ದೃಷ್ಟಿಯಿಂದ ಅಪಘಾತದ ಅರ್ಥವನ್ನು ಪರಿಗಣಿಸಲಾಗುತ್ತದೆ.ವಾಸ್ತವದಲ್ಲಿ, ನಿಯೋಜನೆಯ ಅವಧಿಯಲ್ಲಿ ಕೆಲಸಗಾರನನ್ನು ಲೆ ಮಾಡಲಾಗುತ್ತದೆ.ಕೊಲೆಯಾದವನನ್ನು ಇನ್ನೊಬ್ಬ ವ್ಯಕ್ತಿಯು ನರಹತ್ಯೆ ಮಾಡಿದ್ದಾನೆ.ಕೆಲಸಗಾರನ ದೃಷ್ಟಿಯಿಂದ, ಯಾವುದೋ ಒಂದು ದುರ್ಘಟನೆ ನಡೆಯುತ್ತದೆ ಎಂಬ ಕಲ್ಪನೆಯನ್ನು ಅಥವಾ ನಿರೀಕ್ಷೆಯನ್ನು ಅಥವಾ ಜ್ಞಾನವನ್ನು ಆತನು ಹೊಂದಿರಲಿಲ್ಲ ಮತ್ತು ಆತನು ಸಾಯುವನೆಂದು ಆರೋಪಿಗೆ ಅಥವಾ ಹಲ್ಲೆಕಾರನಿಗೆ ಗೊತ್ತಿರುತ್ತದೆಯೇ ಹೊರತು ಕೆಲಸಗಾರನಿಗಲ್ಲ.

15. ಹಾಗಾಗಿ, ಈ ಸಂಬಂಧದಲ್ಲಿ ಅಂಥ ಹತ್ಯೆಯು ಸಹ ಅಪಘಾತವೇ.ಗಾಯಗಳ ಸಂದರ್ಭದಲ್ಲಿ ಕೆಲಸಗಾರನು ಅಥವಾ ಮರಣದ ಸಂದರ್ಭದಲ್ಲಿ ಅವಲಂಬಿತರು ಸಹ, ವಾಸ್ತವಿಕ ನಿಯೋಜನೆಯ ಆವರಣಗಳ ಹೊರಗಿನ ಸ್ಥಳಗಳನ್ನು ಒಳಗೊಳ್ಳುವ ನಿಯೋಜನೆಯ ಕಾಲ್ಪನಿಕ ವಿಸ್ತರಣೆ ತತ್ವದಡಿ ಕ್ಲೇಮು ಮಾಡಬಹುದು.

16. ಪ್ರಸ್ತುತ ಸಂದರ್ಭದಲ್ಲಿ, ಅವಲಂಬಿತರು ಕ್ಲೇಮು ಮಾಡಿದಂತೆ, ಮೃತ ಬಸವರಾಜ್ ನಿರ್ವಾಹಕನಾಗಿ ಕೆಲಸ ನಿರ್ವಹಿಸುತ್ತಿದ್ದನು ಮತ್ತು ಆತನು ದುರ್ನಡತೆ ಹಾಗೂ ಹಣ ದುರುಪಯೋಗದ ಸಂಬಂಧದಲ್ಲಿ ಸಿಕ್ಕಿಹಾಕಿಕೊಂಡಿದ್ದನು.ಆತನ ವಿರುದ್ಧ ಹೊರಿಸಿದ ಆರೋಪಗಳು ಆದಾಯದಲ್ಲಿ ಚಿಕ್ಕಪುಟ್ಟ ಕಳುವಾಗಿದ್ದವು ಮತ್ತು ನಕಲಿ ಟಿಕೆಟುಗಳನ್ನು ನೀಡಿದುದಾಗಿತ್ತು.ಈ ಸಂಬಂಧದಲ್ಲಿ, ಆತನನ್ನು ತಪ್ಪು ಮಾಡುತ್ತಿರುವಾಗಲೇ ಹಿಡಿಯಲಾಗಿತ್ತು ಮತ್ತು ತತ್ಸಂಬಂಧದಲ್ಲಿ ಪೊಲೀಸ್ ವಿಚಾರಣೆಯನ್ನು ನಡೆಸಲಾಗಿತ್ತು ಹಾಗೂ ಈ ತನಿಖಾ ಪ್ರಕ್ರಿಯೆಯಿಂದ ಆತನಿಗೆ ನೋವು ಮತ್ತು ಕಿರುಕುಳ ಉಂಟಾಯಿತು.ಆದಾಗ್ಯೂ ಈ ಸಂಬಂಧದಲ್ಲಿ, ಮೃತನು ಅಥವಾ ಕ್ಲೇಮುದಾರರು ದ್ವೇಷಪೂರ್ವಕ ವ್ಯವಹರಣೆಯನ್ನು ಪ್ರಾರಂಭಿಸುವುದನ್ನು ಅಥವಾ ಅವರು ಹಾಗೆ ಭಾವಿಸಿದರೆ ನೋವನ್ನು ಆಯ್ಕೆ ಮಾಡಿಕೊಂಡಿರಲಿಲ್ಲ.ಇದಲ್ಲದೆ, ನಿಯೋಜಕರ ಹಾಗೂ ಆತನನ್ನು ಅಣಕ ಮಾಡುತ್ತಿದ್ದ ಇತರ ವ್ಯಕ್ತಿಗಳ ಕೃತ್ಯ ಮತ್ತು ನಡತೆಯಿಂದ ಬಸವರಾಜ್ ದುಗುಡಗೊಂಡಿದ್ದನು, ಅದರಿಂದಾಗಿ ಆತನು ಕೋಭೆಗೊಳಗಾಗಿದ್ದನು ಮತ್ತು ಕೊನೆಯದಾಗಿ ಆತನುದಿನಾಂಕ: 27.09.2000 ದಂದು ಅತಿರೇಕದ ಕ್ರಮವನ್ನು ಆಶ್ರಯಿಸಿ, ಆ ದಿನಾಂಕದಂದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡು ಕೊನೆ ಉಸಿರೆಳೆದನು ಎಂಬುದು ಮೊಕದ್ದಮೆಯಾಗಿದೆ.ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಉದ್ದೇಶಿಸುವ ವ್ಯಕ್ತಿಯು,

ಭಾರತ ದಂಡ ಸಂಹಿತೆಯ 306 ನೇ ಪ್ರಕರಣದ ಅಡಿಯಲ್ಲಿ ದಂಡನೆಗೆ ಗುರಿಯಾಗುತ್ತಾನೆ, ಅದು ಈ ಕೆಳಗಿನಂತಿದೆ:

"306. ಆತ್ಮಹತ್ಯೆಯ ದುಷ್ಪ್ರೇರಣೆ-ಯಾರೇ ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಂಡರೆ, ಅಂಥ ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಕ್ಕೆ ದುಷ್ಪ್ರೇರಿಸುವ ಯಾರೇ ಆಗಲಿ, ಹತ್ತು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಸೆರೆವಾಸದಿಂದ ದಂಡಿತನಾಗತಕ್ಕದ್ದು ಹಾಗೂ ಜುಲ್ಮಾನೆಗೆ ಸಹ ಗುರಿಯಾಗತಕ್ಕದ್ದು."

17. ಹೀಗೆ, ಆತ್ಮಹತ್ಯೆ ಮಾಡಿಕೊಳ್ಳಲು ಪ್ರೇರೇಪಿಸುವುದು ಅಪರಾಧವಾಗಿದ್ದು, ಅದರಲ್ಲಿ ಬಲಿಪಶುವಾದವನನ್ನು, ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಹೊರತುಪಡಿಸಿ ಯಾವುದೇ ಪಾಯವನ್ನು ಆತನು ಹೊಂದದಿರುವಂಥ ಸ್ಥಿತಿಗೆ ಆತನನ್ನು ದೂಡಲಾಗಿದೆ.ಬಲಿಪಶುವಾದವನನ್ನು ಪ್ರೇರೇಪಿಸಿದ ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ಕೃತ್ಯವನ್ನಾಗಲಿ ಅಥವಾ ಅನ್ಯಥಾ ಕೃತ್ಯವನ್ನಾಗಲಿ ಸ್ವತಂತ್ರ ಮತ್ತು ದ್ವಂದ್ವರಹಿತ ದೃಷ್ಟಿಕೋನದಿಂದ ವಿಶ್ಲೇಷಿಸಬೇಕಾಗುತ್ತದೆಯಾದರೂ, ಬಲಿಪಶುವಾದವನ ಅಥವಾ ತನಿಖಾದಾರನ ದೃಷ್ಟಿಕೋನದಿಂದಾಗಲಿ ಅಲ್ಲ.

18. ಮೇಲೆ ಹೇಳಿದಂತೆ ಅಪಘಾತವು, ಒಂದು ಅನಿರೀಕ್ಷಿತ ಮತ್ತು ಅನಪೇಕ್ಷಿತ ಘಟನೆಯಾಗಿದೆ, ಅದು ಒಂದು ಯಾವುದೇ ಕಲ್ಪನೆಯಿಲ್ಲದೆ ನಡೆಯುವ ದುರ್ಘಟನೆಯಾಗಿದೆ.ಆದರೆ ಈ ಮೊಕದ್ದಮೆಯಲ್ಲಿ, ಮೃತ ಬಸವರಾಜನು ವಿಜಯಪುರದ ಸಂತೋಷ್ ಲಾಡ್ಜ್ನ ಕೊಠಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.ಆತ್ಮಹತ್ಯೆಯ ಅಕ್ಷರಶಃ ಅರ್ಥವೆಂದರೆ " ಸ್ವಂತ ಹತ್ಯೆ ".ಹಾಗಾಗಿ, ಒಬ್ಬ ವ್ಯಕ್ತಿಯು ಬ ಈ ಭೂಮಿಯನ್ನು ಬಿಡಲು ನಿರ್ಧರಿಸಿ, ತನ್ನ ಜೀವವನ್ನು ಕೊನೆಗಾಣಿಸಲು, ತನ್ನದೇ ಆದ ಕ್ರಮ ಅಥವಾ ಸಾಧನವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ.ದುಷ್ಪ್ರೇರಣೆಯಾಗಲಿ ಅಥವಾ ಬೇರೆ ರೀತಿಯಲ್ಲಾಗಲಿ, ಬಲಿಪಶುವಾದವನಷ್ಟರಮಟ್ಟಿಗೆ, ಆತನು ನಿರ್ಧಾರಿತ ಉದ್ದೇಶವನ್ನು ಬೆಳಸಿಕೊಂಡಿರುತ್ತಾನೆ, ಮೃತನು ತನ್ನ ಯೋಜನೆಯನ್ನು ಅನುಷ್ಠಾನಕ್ಕೆ ತರುವವರೆಗೆ ಆತನನ್ನು ಹೊರತುಪಡಿಸಿ ಯಾರೊಬ್ಬರಿಗೆ ಅದು ಗೊತ್ತಾಗುವುದಿಲ್ಲ.ಆದುದರಿಂದ ಆತ್ಮಹತ್ಯೆಯ ಘಟನೆಯನ್ನು ಅಪಘಾತವೆಂದು ಕರೆಯುವ ಪ್ರಶ್ನೆಯೇ ಇಲ್ಲ. ಆತ್ಮಹತ್ಯೆ ಮತ್ತು ಅಪಘಾತದ ಮಧ್ಯೆ ಬಹು ದೊಡ್ಡ ವ್ಯತ್ಯಾಸವಿದೆ.ತನ್ನ ನಿರ್ಧಾರವನ್ನು ಅನುಸರಿಸುವ ಪೂರ್ಣ ಮತ್ತು ನೇರ ತಿಳುವಳಿಕೆಯಿಂದ ಒಬ್ಬ ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

19. ಸಂದರ್ಭಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಮೊಕದ್ದಮೆಯಲ್ಲಿ, ಬಸವರಾಜನು ವಿಜಯಪುರದ ಕ.ರಾ.ರ.ಸಾ.ಸಂ.ಯಲ್ಲಿ ನಿರ್ವಾಹಕನಾಗಿ ಕಾರನಿರ್ವಹಿಸುತ್ತಿದ್ದುದು ಕಾರಸಾಧ್ಯ ಸಂದರ್ಭಗಳಾಗಿವೆ.ಆತನು ತಪ್ಪು ಮಾಡುತ್ತಿದ್ದಾಗಲೇ ಸಿಕ್ಕಿಹಾಕಿಕೊಂಡಿದ್ದನು.ಆತನ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿತ್ತು.ಆತನು ಅವಮಾನಿತನಾಗಿದ್ದನು ಅಥವಾ ನೋವಿಗೆ ಒಳಗಾಗಿದ್ದನು.ಉಚ್ಚ ನ್ಯಾಯಾಲಯದಿಂದ ಆತನು ನಿರೀಕ್ಷಣಾ ಜಾಮೀನನ್ನು ಪಡೆಯಬೇಕಿತ್ತು.ಆತನು ಒತ್ತಡಕ್ಕೊಳಗಾಗಿದ್ದನು ಮತ್ತು ನಿರಾಶೆಗೊಳಗಾಗಿ ಸಾಯಲು ನಿರ್ಧರಿಸಿದ್ದನು.

20. ಈ ಸಂದರ್ಭಗಳ ಮೇರೆಗೆ, ಯಾವುದೇ ರೀತಿಯಲ್ಲಿ ಅರ್ಥೈಸಿದರೂ, ಆತ್ಮಹತ್ಯೆಯು ಅಪಘಾತದ ಪರಿಧಿಯೊಳಗೆ ಖಂಡಿತವಾಗಿಯೂ ಬರುವುದಿಲ್ಲ.

21. ಈ ಸಂಬಂಧದಲ್ಲಿ, ಅವಲಂಬಿತರು ಸಹಾನುಭೂತಿಗೆ ಅರ್ಹರಾಗಿರುವರು ಎಂಬುದರಲ್ಲಿ ಯಾವುದೇ ಸಂಶಯವಿಲ್ಲವಾದಾಗ್ಯೂ, ಚಾಲ್ತಿ ನಿಯಮಗಳು ಮತ್ತು ಕಾನೂನಿನ ಉಪಬಂಧಗಳಿಗಲ್ಲ.ಮಾನ್ಯ ಕಾರ್ಮಿಕ ಆಯುಕ್ತರು, ಅಧಿನಿಯಮದ 3 ನೇ ಪ್ರಕರಣದ ವ್ಯಾಪ್ತಿಯನ್ನು ಮತ್ತು ಪರಿಹಾರಕ್ಕಾಗಿ ಅಪಘಾತಕ್ಕೆ ಸಂಬಂಧಿಸಿದ ಉಪಬಂಧಗಳನ್ನು ಸಂಪೂರ್ಣವಾಗಿ ತಪ್ಪಾಗಿ ತಿಳಿದುಕೊಂಡಿದ್ದಾರೆ.

22. ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು, ಲೀಲಾ ಬಾಯಿ ಮತ್ತು ಇನ್ನೊಬ್ಬರು ವಿರುದ್ಧ-ಸೀಮಾ ಚೌಹಾಣ್ ಮತ್ತು ಇನ್ನೊಬ್ಬರು ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿದ್ದಾರೆ.ಸದರಿ ನಿರ್ಣಯದ ಚ 9 ನೇ ಕಂಡಿಕೆಯನ್ನು ಈ ಕೆಳಗಿನಂತೆ ಓದಲಾಗಿದೆ:

9. ಪ್ರಸ್ತುತ ಮೊಕದ್ದಮೆಯ ಸಂಗತಿಗಳಲ್ಲಿ ಮತ್ತು ಸಾಕ್ಷ್ಯದ ಸ್ವರೂಪದಲ್ಲಿ, ಈ ಕೆಳಗಿನಂತೆ ಮೇಲೆ ಹೇಳಿದವುಗಳಲ್ಲಿ ಪರಿಗಣಿಸಿದ ನಿಯೋಜನೆಯ " ಸೈದ್ಧಾಂತಿಕ ಅರ್ಥವ್ಯಾಪ್ತಿಯಯ ತತ್ವವನ್ನು ಅನ್ವಯಿಸಲು ಅಪಘಾತ ಮತ್ತು ನಿಯೋಜನೆಯ ನಡುವೆ ಸ್ಪಷ್ಟ ಸಂಬಂಧವಿತ್ತು:

ಆದಾಗ್ಯೂ, ಕೆಲಸಗಾರನು ವಾಸ್ತವಿಕ ಕೆಲಸದ ಸ್ಥಳಕ್ಕೆ ಹೋಗಿಬರುವ ಪ್ರದೇಶವನ್ನು ಒಳಗೊಳ್ಳುವಂತಾಗಲು ನಿಯೋಜಕನ ಆವರಣಗಳ ಕಾಲ್ಪನಿಕ ವಿಸ್ತರಣಾ ತತ್ವಕ್ಕೆ ಇದು ಒಳಪಡುತ್ತದೆ ಎಂಬದು ಈಗ ಇದು ಇತ್ಯರ್ಥವಾದ ವಿಷಯವಾಗಿದೆ.ಸಮಯ ಮತ್ತು ಸ್ಥಳಗಳೆರಡರಲ್ಲಿ ಕೆಲವು 0 ಯುಕ್ತ ಅರ್ಥವ್ಯಾಪ್ತಿ ಇರಬಹುದು ಹಾಗೂ ಕೆಲಸಗಾರನು ತನ್ನ ನಿಯೋಜಕನ ಆವರಣಗಳನ್ನು ತಲುಪದೇ ಅಥವಾ ಬಿಡದೇ ಇದ್ದರೂ ಸಹ, ಆತನು ನಿಯೋಜನೆಯ ಅವಧಿಯಲ್ಲಿರುವನು ಎಂದು ಪರಿಗಣಿಸಲಾಗುವುದು.ಈ ಕಾಲ್ಪನಿಕ ವಿಸ್ತರಣಾ ತತ್ವವನ್ನು ಎಲ್ಲಾ ಸಮಯದಲ್ಲೂ ಗಮನದಲ್ಲಿರಿಸಿಕೊಂಡು, ಕೆಲಸಗಾರನ ನಿಯೋಜನೆಯ ಅವಧಿಯಿಂದ ಮತ್ತು ನಿಯೋಜನೆಯ ಅವಧಿಯಲ್ಲಿ D ಉದ್ಭವಿಸಿದ ಅಪಘಾತವೇ ಎಂಬುದನ್ನು ನಿರ್ಧರಿಸುವ ಸಲುವಾಗಿ ಅತ್ಯಂತ ಎಚ್ಚರಿಕೆಯಿಂದ ಪ್ರತಿಯೊಂದು ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳನ್ನು ಪರಿಶೀಲಿಸಬೇಕಾಗುತ್ತದೆ.99

23. ಮಾನ್ಯ ನ್ಯಾಯವಾದಿಗಳು ಮೇಲಿನ ನಿರ್ಣಯವನ್ನವಲಂಬಿಸಿ, ನಿಯೋಜನೆಯ ಕಾಲ್ಪನಿಕ ವಿಸ್ತರಣಾ ತತ್ವವು, ಅಪಘಾತವಾದ ಆವರಣಗಳು ಅರ್ಥವು ನಿರ್ದಿಷ್ಟವಾಗಿ ನಿಯೋಜನೆಯ ಆವರಣಗಳಿಗೆ ಸೀಮಿತವಾಗಿರಬೇಕಾದ ಅಗತ್ಯವಿಲ್ಲ, ಇದಲ್ಲದೆ ಕೆಲವು ಸಂದರ್ಭಗಳ ಮೇರೆಗೆ, ಅದು ನಿಯೋಜನೆಯ ಆವರಣಗಳನ್ನು ಮೀರಿ ವಿಸ್ತರಿಸುತ್ತದೆ.

24. ಈ ಸಂಬಂಧದಲ್ಲಿ, ಕಾಲ್ಪನಿಕ ವಿಸ್ತರಣೆ ತತ್ವವು ನಿಯೋಜನೆಯ ಆವರಣಗಳನ್ನು ಮೀರಿದ ಸ್ಥಳಗಳನ್ನು ಒಳಗೊಳ್ಳುತ್ತದೆ ಎಂದು ಉಲ್ಲೇಖಿಸುವುದು ಅಗತ್ಯವಾಗಿದೆ.ಉದಾಹರಣೆಗೆ, ಒಬ್ಬ ನೌಕರನು ಕೆಲಸದ ಸ್ಥಳದಿಂದ ಮನೆಗೆ ಹಿಂದಿರುಗುವಾಗ, ನಿಯೋಜಕನು ಒದಗಿಸಿದ ಮಾರ್ಗದಲ್ಲಿ ಅಥವಾ ನಿಯೋಜಕನು ಒದಗಿಸಿದ ವಾಹನದಲ್ಲಿ ಆತನು ನಿಯೋಜನೆಯ ಆವರಣಗಳಿಂದ ಕಿಲೋಮೀಟರುಗಳಷ್ಟು ದೂರ ಅಥವಾ ದಾಟಿ ಹೋಗಿದ್ದರೆ, ಅಪಘಾತದ ಆ ಸ್ಥಳವು ಖಂಡಿತವಾಗಿಯೂ ನಿಯೋಜನೆಯ ಕಾಲ್ಪನಿಕ ವಿಸ್ತರಣೆ ತತ್ವದಡಿಯಲ್ಲಿ ಬರುತ್ತದೆ.

25. ಪ್ರಸ್ತುತ ಮೊಕದ್ದಮೆಯಲ್ಲಿ, ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರವು ಮೃತನದ್ದಾಗಿದ್ದರಿಂದ, ಇದು ಆವರಣಗಳ ವಿಸ್ತರಣೆಯ ಮೊಕದ್ದಮೆಯಾಗಿರುವುದಿಲ್ಲ ಎಂಬುದೇ ಒಟ್ಟು ವಿಷಯವಾಗಿದೆ.ಈ ಸಂದರ್ಭಗಳ ಹಿನ್ನೆಲೆಯಲ್ಲಿ, ನಿಯೋಜನೆಯ ಕಾಲ್ಪನಿಕ ವಿಸ್ತರಣಾ ತತ್ವವು ಪ್ರಸ್ತುತ ಮೊಕದ್ದಮೆಗೆ ಯಾವುದೇ ರೀತಿಯಲ್ಲೂ ಅನ್ವಯವಾಗುವುದಿಲ್ಲ.

26. ಆದ್ದರಿಂದ, ನಾನು ಈ ಮುಂದಿನ ಆದೇಶವನ್ನು ಹೊರಡಿಸುತ್ತಿದ್ದೇನೆ:

## ಆದೇಶ

ಅಪೀಲನ್ನು ಪುರಸ್ಕರಿಸಲಾಗಿದೆ.ದಿನಾಂಕ: 15.05.2009 ರ ಡಬ್ಲ್ಯುಸಿಎ ಎಸ್‌ಆರ್ -45/2003 ರಲ್ಲಿ ಮಾನ್ಯ ಆಯುಕ್ತರು ಹೊರಡಿಸಿದ ತೀರ್ಪನ್ನು ಮತ್ತು ಐತೀರ್ಪನ್ನು ಈ ಮೂಲಕ ತಳ್ಳಿಹಾಕಲಾಗಿದೆ.ತತ್ಪರಣಾಮವಾಗಿ, ಪ್ರತಿವಾದಿಗಳು ಸಲ್ಲಿಸಿದ ಕ್ಲೇಮು ಅರ್ಜಿಯನ್ನು ವಜಾಗೊಳಿಸಲಾಗಿದೆ.

ಹಣ ಠೇವಣಿ ಮಾಡಿದ ಸಂದರ್ಭದಲ್ಲಿ, ಈಗಾಗಲೇ ಯಾವುದೇ ಮೊತ್ತವನ್ನು ಪಡೆದುಕೊಳ್ಳಲಾಗಿದ್ದರೆ, ಅದನ್ನು ಅಪೀಲುದಾರರಿಗೆ ಮರುಭರ್ತಿ ಮಾಡತಕ್ಕದ್ದು.ಠೇವಣಿಯಲ್ಲಿನ ಮೊತ್ತವನ್ನು ಅಪೀಲುದಾರರಿಗೆ ಮರುಭರ್ತಿ ಮಾಡತಕ್ಕದ್ದು.